Note:

1. Up to 31.12.1998 subsidy paid in full - 100%
2. Up to 31.8.1999 subsidy paid 50% - in both general and special category other then B'lire (Urban) & Rural districts
3. Up to 31.7.99 subsidy paid 50% in general category of Bangalore (urban) & (rural) districts.
4. Sept. 99 to 31.1.2000 subsidy paid 50% to spl. Category, those who have availed loan from financial institutions, other than B'lore Urban & Rural Districts.

5. Upto 28.2.2002 subsidy paid to special category those who have availed loan from financial institutions, other than Bangalore Urban & Rural, Hassan, Karwar, Mandya, Mysore, Tumkur, Shimoga and Dakshina Kannada

ರಾಜ್ಯದಲ್ಲಿ ರೇಷ್ಮೆ ಧಾರಣೆ ಕುಸಿತ

103(132): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಬಹುತೇಕ ಗ್ರಾಮೀಣ ಜನರು ರೇಷ್ಮೆ ಬೆಳೆ ಬೆಳೆದು, ಮಾರುಕಟ್ಟೆಯಲ್ಲಿ ಧಾರಣೆ ಸಿಗದೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ. ಹಾಗಿದ್ದಲ್ಲಿ ಮಾರುಕಟ್ಟೆ ಧಾರಣೆ ಕುಸಿಯಲು ಕಾರಣವೇನು;

ಇ. ಧಾರಣೆ ಕುಸಿದಾಗ ಸರ್ಕಾರ ಬೆಂಬಲ ಬೆಲೆ ಕೊಟ್ಟು ಖರೀದಿಸಲು ಮುಂದಾಗದಿರಲು ಕಾರಣವೇನು;

ಈ. ತೆಂಗು ಕೊಬ್ಬರಿ, ರಾಗಿ, ಜೋಳ ಇತ್ಯಾದಿ ಬೆಳೆಗಳನ್ನು ನಿಗದಿತ ಬೆಲೆಗೆ ಕೊಂಡು ಈ ಬೆಳೆಗಾರರನ್ನು ಮಾತ್ರ ಬೀದಿ ಪಾಲು ಮಾಡುವ ಕಾರಣಗಳೇನು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಮಾರುಕಟ್ಟೆಯಲ್ಲಿ ರೇಷ್ಮೆ ಗೂಡಿನ ಧಾರಣೆ ಹಿಂದಿನ ವರ್ಷಕ್ಕೆ ಹೋಲಿಸಿದಾಗ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಗೆ. ಆದರೆ ಇದರಿಂದ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ಇರುವುದಿಲ್ಲ.

ಆ. ರೇಷ್ಮೆ ಗೂಡು ಹಾಗೂ ಕಚ್ಚಾ ರೇಷ್ಮೆಯ ಧಾರಣೆ ಕಡಿಮೆಯಾಗಲು ಕೆಳಕಂಡ ಅಂಶಗಳು ಕಾರಣವೆಂದು ಅಭಿಪ್ರಾಯ ಪಡಲಾಗಿದೆ.

1. ಚೀನಾ ದೇಶದಿಂದ ಆಮದಾಗುತ್ತಿರುವ ರೇಷ್ಮೆ.

2. ಕೇಂದ್ರ ಸರ್ಕಾರವು 2001-02ನೇ ಸಾಲಿನಲ್ಲಿದ್ದ ಆಮದು ರೇಷ್ಮೆ ಮೇಲೆ ಮೂಲ ಸುಂಕ ಶೇ. 35, ವಿಶೇಷ ಸುಂಕ ಶೇ. 3.5 ವಿಶೇಷ ಹೆಚ್ಚುವರಿ ಸುಂಕ ಶೇಕಡ 4 ರಷ್ಟಿದ್ದದನ್ನು 2002-03ನೇ ಸಾಲಿಗೆ ಮೂಲ ಸುಂಕ ಶೇ. 30 ಹಾಗೂ ವಿಶೇಷ ಹೆಚ್ಚುವರಿ ಸುಂಕ ಶೇ. 5.2 ರಷ್ಟಕ್ಕೆ ಮಾರ್ಪಡಿಸಿದೆ.

3. ಬಾಂಗ್ಲಾದೇಶ ಹಾಗೂ ನೇಪಾಳ ದೇಶಗಳ ಮೂಲಕ ಕಳ್ಳ ಸಾಗಾಣಿಯಿಂದ ಅನಧಿಕೃತ ಬರುತ್ತಿರುವ ರೇಷ್ಮೆ.

ಇ. ರೇಷ್ಮೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸಮಿತಿ ರಚಿಸಲಾಗಿದ್ದು ಸದರಿ ಸಮಿತಿಯು ವರದಿಯನ್ನು ಸಲ್ಲಿಸಿದ್ದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ. ರೇಷ್ಮೆಗೆ ಬೆಂಬಲ ಬೆಲೆ ನೀಡುವ ಸಂಬಂಧದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ತುರುವೇಕೆರೆ ತಾಲ್ಲೂಕು ಅರೇಮಲ್ಲೇನ ಹಳ್ಳಿ ಗ್ರಾಮದ ಬಳಿ ಅಕ್ರಮ ಗಣಿಗಾರಿಕೆ ಬಗ್ಗೆ

104(133): ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ತುರುವೇಕೆರೆ ತಾಲ್ಲೂಕು, ಡಬ್ಬೇಗಟ್ಟ ಹೋಬಳಿ, ಅರೇಮಲ್ಲೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 79ರಲ್ಲಿ ಪುರಾತನಕಾಲದ ದೇವಸ್ಥಾನ ಬಂಡೆ ಮೇಲಿದ್ದರೂ, ಇಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ. ಹಾಗಿದ್ದಲ್ಲಿ, ಅಕ್ರಮ ಗಣಿಗಾರಿಕೆ ಮಾಡುವವರ ವಿರುದ್ಧ ಏನು ಕ್ರಮ ಜರುಗಿಸಲಾಗಿದೆ;

ಇ. ಇದನ್ನು ತಕ್ಷಣ ತಡೆದು ಕಾನೂನು ಕ್ರಮ: ಜರುಗಿಸಲಾಗುವುದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ. ದಿನಾಂಕ: 24.01.2002ರಂದು ಸ್ಥಳ ಪರಿಶೀಲನೆ ನಡೆಸಿ ಕೆಲಸವನ್ನು ನಿಲ್ಲಿಸಲಾಗಿದ್ದು ಹಾಗೂ ಅಲ್ಲಿ ಕೆಲಸ ಮಾಡುವವರಿಗೆ ನೋಟೀಸ್ ಜಾರಿ ಮಾಡಲಾಗಿದೆ.

ಇ. ಸದರಿಯವರಿಗೆ ನೋಟೀಸ್ ಜಾರಿ ಮಾಡಿ ಅಲ್ಲಿ ನಡೆಯುತ್ತಿದ್ದ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ.